**ಕರ್ನಾಟಕ ಸರ್ಕಾರ**

**ವಿಷಯ :** ಲೋಕೋಪಯೋಗಿ ಇಲಾಖೆಯ ಸಂಹಿತೆಗಳನ್ನು ಪರಿಷ್ಕರಿಸುವ ಬಗ್ಗೆ ಸೃಜಿಸಲಾಗಿದೆ ಸಮಿತಿಯ ಪುನರ್‌ರಚನೆ

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ ಲೋಇ 315 ಸಿಆರ್‌ಎಂ 96 .......... ಬೆಂಗಳೂರು ದಿನಾಂ .......

ಸರ್ಕಾರದ ಓದಲಾದ ಆದೇಶ ದಿನಾಂಕ 20.08.1998 ಚಾಲ್ತಿಯಲ್ಲಿರುವ ಇಲಾಖೆ ಸಂಹಿತೆಗಳನ್ನು ಮತ್ತು ಕಟ್ಟಡ, ರಸ್ತೆಗಳ ಸ್ಪೆಸಿಫಿಕೇಷನ್‌ಗಳನ್ನು ಪರಿಷ್ಕರಿಸಲು ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ 199ರಲ್ಲಿ ನೀಡಿರುತ್ತದೆ. ಈ ಪೈಕಿ ಕಟ್ಟಡ ಮತ್ತು ರಸ್ತೆಗಳ ಸ್ಪೆಸಿಫಿಕೇಷನ್‌ಗಳನ್ನು ಇಲಾಖೆಯ ಕಾಮಗಾರಿಗಳಲ್ಲಿ ದಿನಾಂಕ 11120002ರಿಮದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲು ಈಗಾಗಲೇ ಸರ್ಕಾರದಿಂದ ಸುತ್ತೋಲೆಯನ್ನು ದಿನಾಂಕ 18.09.2002ರಲ್ಲಿ ನೀಡಲಾಗಿದೆ. ವಿಶ್ವಬ್ಯಾಂಕ್ ತಂಡವು ನೀಡಿರುವ "Country Procurement Assessment Report for Karnataka State (CPAR)ನಲ್ಲಿ ಶಿಫಾರಸ್ಸು ಮಾಡಿರುವಂತೆ ಸಾರ್ವಜನಿಕ ಸಂಗ್ರಹಣೆಯಲ್ಲಿ ಸುಧಾರಣೆ ಕೈಗೊಳ್ಳಲು ರಾಜ್ಯ ಮಟ್ಟದಲ್ಲಿ ಸೃಜಿಸಲಾಗಿರುವ "Standing Committee for implementation of CPAR" ಸಭೆಯಲ್ಲಿ ಕರಡು ಮಾರ್ಪಡಿತ ಇಲಾಖಾ ಸಂಹಿತೆಗಳನ್ನು ಜಾರಿಗೆ ತರುವ ಬಗ್ಗೆ ಚರ್ಚಿಸಲಾಗಿದ್ದು. ರಾಜ್ಯ ಸರ್ಕಾರವು ಜಾರಿಗೊಳಿಸಿರುವ "ಕರ್ನಾಟಕ ಸಾರ್ವಜನಿಕ ಸಂಗ್ರಹಗಳಲ್ಲಿ ಪಾರದರ್ಶಕತೆ ಅಧಿನಿಯಮ 1999" ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆಯ ಸಂಹಿತೆಗಳನನು ಮತ್ತು ಸಾಮಗ್ರಿ ಕೈಪಿಡಿಯನ್ನು ಪರಿಷ್ಕರಿಸುವ ಕಾರ್ಯವನ್ನು ಮೇಲೆ ಓದಲಾದ ಆದೇಶದಲ್ಲಿ ರಚಿಸಲಾಗಿದ್ದ ಸಮಿತಿಗೆ ವಹಿಸುವಂತೆ ನಿರ್ಣಯ ಕೈಗೊಳ್ಳಲಾಗಿದೆ..... ....... .........

ಇದರಂತೆ ಸದರಿ ಸಮಿತಿಯನ್ನು ಪುನರ್ ರಚಿಸಲು ಈ ಆದೇಶ ..........

**ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲುಡಿ 22 ಆರ್‌ಡಿಎಫ್ 2004 ಬೆಂಗಳೂರು ದಿನಾಂಕ: 23.12.2004**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಲೋಕೋಪಯೋಗಿ ಇಲಾಖೆಯ ಸಂಹಿತೆಗಳನ್ನು ಮತ್ತು ಸಾಮಗ್ರಿ ಕೈಪಿಡಿಯನ್ನು ಪರಿಷ್ಕರಿಸುವ ಸಲುವಾಗಿ ಈ ಹಿಂದೆ ರಚಿಸಲಾಗಿದ್ದ ಸಮಿತಿಯನ್ನು ಕೆಳಕಂಡಂತೆ ಪುನರ್ ರಚಿಸಿ ಆದೇಶ ಹೊರಡಿಸಲಾಗಿದೆ.

1. ಶ್ರೀ ಟಿ.ಜಿ. ರಾಧಾಕೃಷ್ಣ, ನಿವೃತ್ತ ಮುಖ್ಯ ಇಂಜಿನಿಯರ್ - ಅಧ್ಯಕ್ಷರು
2. ಕೆ. ನಾರಾಯಣನ್, ನಿವೃತ್ತ ಅಧೀಕ್ಷಕ ಇಂಜಿನಿಯರ್ - ಸದಸ್ಯರು
3. ಶ್ರೀ ಬಿ.ವಿ. ಶ್ರೀಕಾಂತ್, ವಿಶೇಷಾಧಿಕಾರಿ,
   ಲೋಇ ಆರ್ಥಿಕ ಕೋಶ, ಆರ್ಥಿಕ ಇಲಾಖೆ - ಸದಸ್ಯರು

ಈ ಸಮಿತಿಯ ಕಾರ್ಯವ್ಯಾಪ್ತಿಯು ದಿನಾಂಕ 20.08.1998ರ ಆದೇಶದಂತೆ ಇರುತ್ತದೆ. ಈ ಸಮಿತಿಗೆ ಉಪ ಮುಖ್ಯ ಇಂಜಿನಿಯರ್ ರಸ್ತೆಗಳು ಸಂಪರ್ಕ ಮತ್ತು ಕಟ್ಟಡ, ದಕ್ಷಿಣ ವಲಯ ಇವರು ಸಮನ್ವಯ ಅಧಿಕಾರಿಯಾಗಿರುತ್ತಾರೆ. ಹಾಗೂ ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಇವರು ಸದರಿ ಸಮಿತಿಯ ಕಾರ್ಯಾಚರಣೆಗೆ ಅಗತ್ಯವಾದ ಸ್ಥಳಾವಕಾಶ ವಾಹನ ಸೌಕರ್ಯ ಸಿಬ್ಬಂದಿ ಹಾಗೂ ಅವಶ್ಯವಿರುವ ಲೇಖನ ಸಾಮಗ್ರಿ ಇತ್ಯಾದಿಗಳನ್ನು ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಿದೆ. ಈ ಸಮಿತಿಗೆ ಕಾರ್ಯಾಚರಣೆಗೆ ಅವಶ್ಯವಾಗಬಹುದಾದ ವೆಚ್ಚವನ್ನು ಲೋಕೋಪಯೋಗಿ ಇಲಾಖೆ ಲೆಕ್ಕ ಶೀರ್ಷಿಕೆ "2059 (ಯೋಜನೇತರ) "Materials & Supplies" ಅಡಿ ಭರಿಸಬಹುದಾಗಿದೆ.

ಸಮಿತಿಯು ಪರಿಷ್ಕೃತೆ ಕರಡು ಸಂಹಿತೆಗಳನ್ನು 3 ತಿಂಗಳಲ್ಲಿ ಸರ್ಕಾರಕ್ಕೆ ಸಲ್ಲಿಸುವುದು.

**ಆರ್. ಮಂಜುಳ**
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ ಇಲಾಖೆ (ನಬಾರ್ಡ್)